# ದೇಶ ದೇಶಗಳನು ಸುತ್ತಿ..

ಈ ಕುಟುಂಬದ ಸದಸ್ಯರದು ಫ್ರಾನ್ಸ್ ಮೂಲವಾದರೂ ಜಪಾನ್, ಸಿಂಗಾಪುರ, ಅಮೆರಿಕ, ಸ್ವೀಡನ್, ಜಪಾನ್‌ಗಳಲ್ಲೂ ಅನೇಕ ವರ್ಷ ಕೆಲಸ ಮಾಡಿ ನಂತರ ಭಾರತಕ್ಕೆ ಬಂದವರು. ಹೀಗಾಗಿ ಜಗತ್ತಿನ ವಿವಿಧ ದೇಶಗಳ ವೈವಿಧ್ಯಮಯ ಜೀವನಶೈಲಿಗೆ ಇವರು ಆತುಕೊಂಡವರು.



ಚಿತ್ರ: ಬಿ.ಕೆ. ಜನಾರ್ದನ್

ಅರೇಲಿಯ, ಲೀಸಾ, ಕಿಮ್, ಮೇರಿಯನ್ ಮತ್ತು ಲಿಯೊನಿಲ್

ಉದ್ಯೋಗ, ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮುಂತಾದ ವಿಷಯಗಳಲ್ಲಿ ಬೆಂಗಳೂರು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಕಾರಣ ಹಲವು ವಿದೇಶೀಯರಿಗೆ ಈ ನಗರ ಪ್ರಮುಖ ಔದ್ಯೋಗಿಕ ತಾಣವಾಗಿ ಕಂಡಿದೆ. ಕೆಲವು ವಿದೇಶೀಯರು ತಮ್ಮ ಸ್ವಂತ ಊರಿನಿಂದ ನೇರವಾಗಿ ಬೆಂಗಳೂರಿಗೆ ಬಂದು ಉದ್ಯೋಗದಲ್ಲಿ ತೊಡಗಿ ಇಲ್ಲೇ ಖಾಯಂ ಆಗಿ ನೆಲೆ ಊರಿದವರಾಗಿದ್ದರೆ ಇನ್ನೂ ಕೆಲವರು ತಮ್ಮ ವೃತ್ತಿ ನಿಮಿತ್ತ ವಿವಿಧ ದೇಶಗಳನ್ನು ಸುತ್ತಿ ಮತ್ತೆ ಇಲ್ಲಿಗೆ ಬಂದವರಿದ್ದಾರೆ. ಎರಡನೆ ಪ್ರಕಾರದ ವಿದೇಶೀಯರಿಗೆ ಸಾಮಾನ್ಯವಾಗಿ ಎಲ್ಲ ದೇಶಗಳ ಸಂಸ್ಕೃತಿ, ಜೀವನಶೈಲಿ, ಆಹಾರ ಪದ್ಧತಿ, ಆಚರಣೆಗಳ ಬಗ್ಗೆ ಜ್ಞಾನವಿರುತ್ತದೆ. ಜೀವನಾನುಭವವೂ ಹೆಚ್ಚಿರುತ್ತದೆ, ಕುತೂಹಲಕರ ಕತೆಗಳಿರುತ್ತವೆ. ಹಾಗೆ ಬಂದವರಲ್ಲಿ ಫ್ರಾನ್ಸ್ ಮೂಲದ ಲಿಯೊನಿಲ್ ಮತ್ತು ಅರೇಲಿಯ ದಂಪತಿ ಒಬ್ಬರು.

ಇವರದು ಫ್ರಾನ್ಸ್ ಮೂಲವಾದರೂ ಜಪಾನ್, ಸಿಂಗಾಪುರ, ಅಮೆರಿಕ, ಸ್ವೀಡನ್, ಜಪಾನ್‌ಗಳಲ್ಲೂ ಅನೇಕ ವರ್ಷ ಕೆಲಸ ಮಾಡಿ ನಂತರ ಭಾರತಕ್ಕೆ ಬಂದ ಕುಟುಂಬ. ಹೀಗಾಗಿ ವೈವಿಧ್ಯಮಯ ಜೀವನಶೈಲಿಗೆ ಇವರು ಆತುಕೊಂಡವರು. ಲಿಯೊನಿಲ್ ಪ್ಲ್ಯಾಚ್, ಅವರ ಪತ್ನಿ ಅರೇಲಿಯ ಮತ್ತು ಮಕ್ಕಳಾದ ಮೇರಿಯನ್, ಲೀಸಾ ಮತ್ತು ಕಿಮ್ ಅವರು ಕೂಡ ಈಗ ಬೆಂಗಳೂರಿನ ಖಾಯಂ ನಿವಾಸಿಯಾಗಿದ್ದಾರೆ.

ಲಿಯೊನಿಲ್ ಖಾಸಗಿ ಕಂಪೆನಿಯೊಂದರಲ್ಲಿ ಪ್ರಾಜೆಕ್ಟ್ ಮ್ಯಾನೇಜರ್. ಇದೇ ಕೆಲಸದ ನಿಮಿತ್ತ ಈ ಕುಟುಂಬ ಬೆಂಗಳೂರಿಗೆ ಬರುವುದಕ್ಕೂ ಮುನ್ನ ಅಮೆರಿಕ, ಸ್ವೀಡನ್ ಮತ್ತು ಜಪಾನ್‌ಗಳಲ್ಲೂ ನೆಲೆಸಿತ್ತು. ಹೀಗೆ ಇವರು ಕಳೆದ 15 ವರ್ಷಗಳಿಂದ ಫ್ರಾನ್ಸ್ ಬಿಟ್ಟು ವಿಶ್ವದ ನಾನಾ ಭಾಗಗಳಲ್ಲಿ ಕೆಲಸ ಮಾಡುತ್ತಾ ಬಂದಿದ್ದಾರೆ. ಎಲ್ಲ ಕಡೆಗಳಲ್ಲೂ ವೈವಿಧ್ಯಮಯ ಅನುಭವಗಳನ್ನೇ ಇವರು ಪಡೆದಿದ್ದಾರೆ.

'ಜಪಾನ್‌ನಲ್ಲಿ ಕೆಲಸದ ವಾತಾವರಣ ಭಿನ್ನ, ಭಾರತದಲ್ಲಿ ಮತ್ತೂ ವಿಭಿನ್ನ. ಜಪಾನ್‌ನಲ್ಲಿ ಯಾವ ವಿದೇಶೀಯ ಬಂದರೂ ಕೆಲಸ ಮಾಡುವುದು ಸುಲಭ. ಕಟ್ಟುಪಾಡುಗಳು, ನಿರ್ಬಂಧಗಳಿಲ್ಲದೇ ಸುಲಭವಾಗಿ, ಸುಲಲಿತವಾಗಿ ಅಲ್ಲಿ ಕೆಲಸ ಮಾಡಬಹುದು. ಇಲ್ಲಿ ಅಷ್ಟೊಂದು ಸ್ವಾತಂತ್ರ್ಯ ಇಲ್ಲ ಎಂಬುದನ್ನು ಗಮನಿಸಿದ್ದೇನೆ. ನಾನು ಕೆಲಸ ಮಾಡುವಲ್ಲಿ ವಿವಿಧ ಭಾಷೆಯ, ಧರ್ಮದ ಜನರಿದ್ದಾರೆ. ಬಹುಸಂಸ್ಕೃತಿ ಇಲ್ಲಿನ ವೈಶಿಷ್ಟ್ಯ. ಒಬ್ಬರನ್ನೊಬ್ಬರು ಅರಿತು ಕೆಲಸ ಮಾಡುವುದು ಇಲ್ಲಿನ ಪದ್ಧತಿ. ಇಲ್ಲಿನ ಜನ ಕೆಲಸಕ್ಕೆ ಉತ್ತಮ ಪ್ರೇರೇಪಣೆ ನೀಡುತ್ತಾರೆ. ಹೊಸ ಹೊಸ ಕೌಶಲಗಳನ್ನು ಕಲಿಯುವ ಕುತೂಹಲ ಇಲ್ಲಿನವರಿಗಿದೆ. ಅಲ್ಲದೆ ಇಲ್ಲಿನವರು ಬಹಳ ಸ್ನೇಹಜೀವಿಗಳು' ಎನ್ನುತ್ತಾರೆ ಲಿಯೊನಿಲ್.

'ದೇಶದ ನಾನಾ ಭಾಗಗಳಲ್ಲಿ ಪ್ರವಾಸ ಮಾಡಿದ್ದೇವೆ. ರಾಜಸ್ಥಾನ, ಕೇರಳ, ಹಂಪಿ ಮತ್ತು ಪಾಂಡಿಚೇರಿ ಪ್ರವಾಸಿ ತಾಣಗಳು ಬಹಳ ಸುಂದರವಾಗಿದ್ದು, ಸದಾ ನೆನಪಿನಲ್ಲಿ ಉಳಿಯುವಂಥದ್ದು. ಪಾಂಡಿಚೇರಿ ಅಂತೂ ಮಿನಿ ಫ್ರಾನ್ಸ್ ಎಂದೇ ಹೇಳಬಹುದು. ಅಷ್ಟೊಂದು ಸುಂದರವಾಗಿದೆ. ಇನ್ನೊಂದು ತಮಾಷೆ ಎಂದರೆ ಪಾಂಡಿಚೇರಿಯಲ್ಲಿ ಹೆಚ್ಚಿನವರು ಫ್ರೆಂಚ್ ಮಾತನಾಡುತ್ತಾರೆ. ಇಲ್ಲಿ ಫ್ರೆಂಚ್ ಕಾಲೊನಿ ಇದೆ. ಇಲ್ಲಿ ಬಹಳ ಮಂದಿ ಫ್ರಾನ್ಸ್‌ನಿಂದ ಬಂದು ನೆಲೆಸಿದವರಿದ್ದಾರೆ' ಎಂದು ಅವರು ಮಾಹಿತಿ ನೀಡುತ್ತಾರೆ.

'ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಶಾಪಿಂಗ್ ಮಾಡುವುದು ನಮಗಿಷ್ಟ. ಇಲ್ಲಿ ಬಂದ ಮೇಲೆ ಹೊಲಿಗೆ ಕಲಿತೆ.ಇದಕ್ಕೆ ಬೇಕಾದ ಮೆಟೀರಿಯಲ್‌ಗಳನ್ನು ಕಮರ್ಷಿಯಲ್ ಸ್ಟ್ರೀಟ್‌ನಿಂದಲೇ ತರುತ್ತೇವೆ ' ಎನ್ನುತ್ತಾರೆ ಅರೇಲಿಯ.

## ಸುರಕ್ಷತೆ ಇಲ್ಲ

'ಈ ನಗರ ಹೆಣ್ಣು ಮಕ್ಕಳಿಗೆ ಸುರಕ್ಷಿತವಾದ ಜಾಗವಲ್ಲ ಎಂಬುದು ನನ್ನ ಅನಿಸಿಕೆ. ನಮಗೆ ಇಬ್ಬರು ಹದಿಹರೆಯದ ಹೆಣ್ಣುಮಕ್ಕಳಿದ್ದು, ರಾತ್ರಿ ಹೊತ್ತು ಹೊರಗೆ ಕಳಿಸಲು ಭಯವಾಗುತ್ತದೆ. ಆದರೆ ಜಪಾನ್‌ನಲ್ಲಿ ರಾತ್ರಿ ಒಂದು ಗಂಟೆಗೆ ಮಕ್ಕಳು ಮನೆಗೆ ಬಂದರೂ ಯಾವುದೇ ಭಯವಿರುವುದಿಲ್ಲ. ಉಡುಪಿನ ವಿಷಯದಲ್ಲೂ ಅಷ್ಟೆ. ಶಾರ್ಟ್ಸ್, ಸ್ಕರ್ಟ್, ಟೈಟ್ಸ್ ಹೀಗೆ ಯಾವುದೇ ಉಡುಪು ತೊಟ್ಟರೂ ಅಲ್ಲಿ ಪ್ರತಿಕ್ರಿಯಿಸಲ್ಲ. ಆದರೆ ಇಲ್ಲಿ ಯಾವ ಡ್ರೆಸ್ ಹಾಕಿಕೊಂಡರೂ ಜನ ಕಮೆಂಟ್ ಮಾಡ್ತಾರೆ' ಎನ್ನುತ್ತಾರೆ ಅವರು.

ಇವರ ಮಕ್ಕಳಾದ ಮೇರಿಯನ್ 16 ವರ್ಷದವಳು, ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಓದುತ್ತಿದ್ದಾಳೆ. ಕ್ರೀಡೆಯಲ್ಲಿ ವಿಶೇಷ ಆಸಕ್ತಿ. ಲೀಸಾಗೆ 15 ವರ್ಷ, ಅವಳ ಶಿಕ್ಷಕ–ಶಿಕ್ಷಕಿಯರು ಅಂದರೆ ಅವಳಿಗೆ ಬಹಳ ಪ್ರೀತಿ, ಅಕ್ಕರೆ, ಅಭಿಮಾನ. ಎಂಟು ವರ್ಷದ ಕಿಮ್ ಮೂರನೆ ತರಗತಿ. ಅವಳಿಗೆ ಶಾಲೆ, ಗೆಳತಿಯರು ಅಂದರೆ ಬಹಳ ಇಷ್ಟ. ಮೂವರೂ ಇಲ್ಲಿನ ಸಂಸ್ಕೃತಿ, ಆಹಾರ ಕ್ರಮಕ್ಕೆ ಚೆನ್ನಾಗಿ ಹೊಂದಿಕೊಂಡಿದ್ದಾರಂತೆ.

★ ಅವನೀಶ್